# ಕನ್ನಡದ ಕೆಲಸಕ್ಕೆ ನೂರಾರು ಕೋಟಿ



ವೆಂಕಟ್ರಮಣ ಭಟ್

ಕನ್ನಡನಾಡಿನಲ್ಲಿ ಅಗತ್ಯವಾಗಿ ಆಗಬೇಕಾಗಿರುವ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕೆಲಸಗಳಿಗೆ ರಾಜ್ಯದ ಮುಂಗಡಪತ್ರದಲ್ಲಿ 250 ಕೋಟಿ ರೂಪಾಯಿಗಳನ್ನು ನೀಡಲಾಗಿದೆ, ದೇಶದ ಬೇರೆ ಯಾವುದೇ ಸರ್ಕಾರ ಇಷ್ಟೊಂದು ಹಣ ನೀಡಿಲ್ಲ ಎಂಬುದು ನಮ್ಮ ಮುಖ್ಯಮಂತ್ರಿಗಳು ಕಳೆದ ತಿಂಗಳು ಮಡಿಕೇರಿಯಲ್ಲಿ ನಡೆದ ಎಂಬತ್ತನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸುತ್ತ ಮಾಡಿದ ಭಾಷಣದ ಒಂದು ಮುಖ್ಯವಾದ ಅಂಶ. ಕನ್ನಡದ ಕೆಲಸಕ್ಕೆ ಸಂಪನ್ಮೂಲದ ಕೊರತೆ ಇರುವುದಿಲ್ಲ ಎಂದು ರಾಜ್ಯದ ಆಡಳಿತದ ನೇತೃತ್ವ ವಹಿಸಿರುವವರೇ ಹೇಳಿರುವುದು ಸ್ವಲ್ಪ ಸಮಾಧಾನದ ಸಂಗತಿ.

ಆದರೆ ಇಲ್ಲಿ ಇನ್ನೂ ಮುಖ್ಯವಾಗುವ ವಿಷಯವೆಂದರೆ ಈ ಸಂಪನ್ಮೂಲದ ಸೌಕರ್ಯವನ್ನು ಯಾವ್ಯಾವುದಕ್ಕೆ ಬಳಸಲಾಗುತ್ತದೆ ಅನ್ನುವುದು. ಕನ್ನಡದ ಮುನ್ನಡೆಗೆ ಸಂಬಂಧಿಸಿದಂತೆ ಆದ್ಯತೆಗಳನ್ನು ಗುರುತಿಸುವ ಕೆಲಸ ಮೊದಲು ಆಗಬೇಕಲ್ಲವೇ? 'ನಿಘಂಟು ಕಚೇರಿಯನ್ನು ಪುನರಾರಂಭಿಸಬೇಕಾಗಿದೆ. ನಿಘಂಟು ರಚನೆ ಒಮ್ಮೆ ಆಗಿ ಮುಗಿಯುವ ಕೆಲಸವಲ್ಲ. ಅದು ನಿರಂತರವಾಗಿ ನಡೆಯಬೇಕು' ಎಂದು ಒಂದಾದರೂ ಆದ್ಯತೆಯ ಬಗ್ಗೆ ಭಾಷಣದಲ್ಲಿ ಹೇಳಲಾಗಿದೆ. ಆದರೆ ನಿಘಂಟು ಕಚೇರಿ ಕಾರ್ಯವನ್ನು ಸಂಪೂರ್ಣವಾಗಿ ಗಣಕೀಕರಿಸುವ ಮೂಲಕ ಅದರ ನಿರಂತರತೆಯನ್ನು ಆಧುನೀಕರಿಸದಿದ್ದರೆ, ನಿಘಂಟು ರಚನೆಯ ಹೊಸಕಾಲದ ಪ್ರಯತ್ನಗಳನ್ನು ಪ್ರೋತ್ಸಾಹಿಸದಿದ್ದರೆ, ಈ ಆದ್ಯತೆಯೂ ಅರ್ಧಂಬರ್ಧ! ನಿಘಂಟು ಕಾರ್ಯ ಮಾತ್ರವಲ್ಲ, ಕನ್ನಡದ ಪರಂಪರೆಯ ರಕ್ಷಣೆ ಮತ್ತು ಇನ್ನಿತರ ಅತ್ಯಗತ್ಯ ಕೆಲಸಗಳಿಗಾಗಿ, ಅಂತರ್ಜಾಲದ ಅಪಾರ, ಅನಂತ ಸಾಧ್ಯತೆಗಳನ್ನು ಬಳಸಿಕೊಳ್ಳಲು ಮುಂದಾಗದಿದ್ದರೆ ವಿಶ್ವದಲ್ಲಿ ಎಲ್ಲ ಭಾಷೆಗಳಿಗಿಂತ ಕನ್ನಡ ಹಿಂದುಳಿಯುವ ಅಪಾಯ ಕಾದಿದೆ. ಕನ್ನಡದ ಮುನ್ನಡೆ ಎಂದರೆ ಬರೀ ನೆಪ–ನಿಮಿತ್ತಗಳನ್ನು ಹುಡುಕಿ ಆಡಂಬರದ ಉತ್ಸವಗಳನ್ನು ನಡೆಸುವುದು, ಭರ್ಜರಿ ಭವನಗಳನ್ನು ಕಟ್ಟುವುದು ಮಾತ್ರ ಅಲ್ಲ; ಕನ್ನಡಕ್ಕೆ ಅತ್ಯಾಧುನಿಕ ತಂತ್ರಜ್ಞಾನವನ್ನು ಜೋಡಿಸಿ ನಾಳೆ ಹುಟ್ಟುವ ಮಕ್ಕಳ ಮನಗಳಲ್ಲೂ ಕನ್ನಡವನ್ನು ಕಟ್ಟುವುದು ಕೂಡ.

**–ಆರ್. ಪೂರ್ಣಿಮಾ**